**(ದಿನಾಂಕಃ 24-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

ಮುಂದುವರೆದ ಪಾಟಿ ಸವಾಲು ಃ ಶ್ರೀ ಪಿ.ಆರ್.ಸಿ. ಪ್ರತಿವಾದಿ ಪರ ವಕೀಲರಿಂದ -

ನಾನು ಶಾಲೆ ಕಲಿತಿಲ್ಲ. ಗೂಳಪ್ಪ ರವರಿಗೆ ಗುಡಸ ಗ್ರಾಮದಲ್ಲಿ ಒಟ್ಟು 2 ಆಸ್ತಿಗಳು ಇದ್ದವು. ಗೂಳಪ್ಪ ಇವರ ಹೆಸರಿನಲ್ಲಿ ಮನೆ ಇವೆ. ಆದರೆ ಸದ್ರಿ ಮನೆಯಲ್ಲಿ ನಾನೇ ವಾಸವಾಗಿರುತ್ತೇನೆ. ಸದ್ರಿ ಮನೆ ನಂಬರ ನನಗೆ ಗೊತ್ತಿಲ್ಲ. ಈಗ ದಾರೆವಯನ್ನು 2 ಜಮೀನುಗಳ ಮೇಲೆ ಮಾತ್ರ ಹೂಡಿರುತ್ತೇನೆ ಎಂದರೆ ಸರಿ . ಸದ್ರಿ ಮನೆಯನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ . ಸದ್ರಿ ಮನೆ ಶೆಟ್ಟೆಪ್ಪರವರ ಹೆಸರಿನಲ್ಲಿರುತ್ತದೆ. ಶೆಟ್ಟೆಪ್ಪ ಇವರು 1983 ರಲ್ಲಿ ತೀರಿಕೊಂಡಿರುತ್ತಾರೆ. ಶೆಟ್ಟೆಪ್ಪ ತೀರಿಕೂಂಡು ಸುಮಾರು 38 ವರ್ಷ ಆಗಿರುತ್ತದೆ ಎಂದರೆ ಇರಬಹುದು. ಗೂಳಪ್ಪ ತೀರಿಕೊಂಡ ನಂತರ ಸದ್ರಿ ಮನೆಯನ್ನು ನಮ್ಮ ಹೆಸರಿಗೆ ದಾಖಲಿಸಲು ಗ್ರಾಮ ಪಂಚಾಯತಿಯಲ್ಲಿ ಅರ್ಜಿ ಕೊಟ್ಟಿರುತ್ತೇವೆ. ಸದ್ರಿ ಮನೆಯ ಉತಾರದಲ್ಲಿ ನಮ್ಮ ಹೆಸರನ್ನು ಹಚ್ಚಿ ರುತ್ತಾರೆ. ಸದ್ರಿ ಮನೆಯ ಉತಾರವನ್ನು ಈ ನ್ಯಾಯಾಲಯದಲ್ಲಿ ಹಾಜರ ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನನ್ನ ಮದುವೆಯಾಗಿರುತ್ತದೆ. ನನ್ನನ್ನು ಸಂಕೇಶ್ವರಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ಆಧಾರ ಕಾರ್ಡ , ಮತದಾರರ ಯಾದಿ ಹಾಗೂ ರೇಶನ ಕಾರ್ಡ ಎಲ್ಲಾ ಸಂಕೇಶ್ವರ ವಿಳಾಸದಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎಲ್ಲಾ ದಾಖಲೆಗಸಲ್ಲಿ ಗುಡಸ ವಿಳಾಸ ಇರುತ್ತದೆ ಎನುತ್ತಾರೆ. ಆಧಾರ ಕಾರ್ಡ , ಮತದಾರರ ಯಾದಿ ಹಾಗೂ ರೇಶನ ಕಾರ್ಡ ಗಳನ್ನು ಹಾಜರ ಪಡಿಸಲು ನನಗೆ ಯಾವುದೆ ತೊಂದರೆ ಇರುವುದಿಲ್ಲ. ನಾನು ವಾದಿ ನಂ. 2 ರಿಂದ 8 ರವರ ಪರವಾಗಿಯೂ ಸಹ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ .

ಶೆಟ್ಟೆಪ್ಪನ ಹೆಂಡತಿ ಹೆಸರು ಶಿವಲಿಂಗವ್ವ . ಸದ್ರಿ ಶಿವಲಿಂಗವ್ವರವರಿಗೆ ಶಿವಪ್ಪ ಹರಿಜನ ರವರ ಜೊತೆಗೆ ಲಗ್ನ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಶೆಟ್ಟೆಪ್ಪ ಶಿವಲಿಂಗರವರ ಮದುವೆ ಎಷ್ಟು ವರ್ಷಗಳ ಹಿಂದೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಶೆಟೆಪ್ಪ ಮತ್ತು ಶಿವಲಿಂಗವ್ವ ಇವರು ಗಂಡ ಹೆಂಡತಿ ಎಂದು ತೋರಿಸಲು ಯಾವುದೇ ಫೊಟೊಗಳು ಇರುವುದಿಲ್ಲ

ಹಾಗೂ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ. ಶಿವನವ್ವ ಎಷ್ಟು ವರ್ಷಗಳ ಹಿಂದೆ ಹುಟ್ಟಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಅವಳ ಜನನ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಯಾವ ಸಾಲಿನಲ್ಲಿ ಹುಟ್ಟಿರುತ್ತೇನೆ ಎಂದು ನನಗೆ ಗೊತ್ತಿಲ್ಲ ಹಾಗೂ ಯಾವುದೇ ಜನನ ದಾಖಲೆಗಳು ಇರುವುದಿಲ್ಲ.

ತುಳಸವ್ವ ಎಷ್ಟು ವರ್ಷಗಳ ಹಿಂದೆ ಹುಟ್ಟಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಅವಳ ಜನನ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ತುಳಸವ್ವ ಈಗ್ಗೆ 20 ವರ್ಷಗಳ ಹಿಂದೆ ತೀರಿಕೊಂಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಮೂಲ ಪುರುಷ ಘೂಳಪ್ಪಾ ಯಾವಾಗ ತೀರಿಕೊಂಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಘೂಳಪ್ಪಾ ಇವರಿಗೆ ಶೆಟ್ಟೆಪ್ಪ ಮತ್ತು ಬಾಳಪ್ಪ ಎಂಬ ಇಬ್ಬರು ಗಂಡು ಮಕ್ಕಳು ಮತ್ತು ತಂಗೆವ್ವ ಎಂಬ ಒಬ್ಬ ಹೆಣ್ಣು ಮಗಳು ಎಂದರೆ ಸರಿ . ಸದ್ರಿ ದಾವೆಯನ್ನು ನಾವು ಪಾಲು ವಿಭಾಗ ಕೋರಿ ಮಾಡಿರುತ್ತೇವೆ . ತಂಗೆವ್ವ ಇವರ ಗಂಡನ ಹೆಸರು ಹಾಗೂ ಅಡ್ಡ ಹೆಸರು ನನಗೆ ಗೊತ್ತಿಲ್ಲ. ಸದ್ರಿ ತಂಗೆವ್ವ ಚಿಕ್ಕಾಲಗುಡ್ಡ ಗ್ರಾಮದಲ್ಲಿ ವಾಸ ಇರುತ್ತಾಳೆ ಎಂದರೆ ಸರಿ . ಗುಡಸದಿಂದ ಚಿಕ್ಕಾಲಗುಡ್ಡ ಸುಮಾರು 20 ಕಿ.ಮೀ ಅಂತರ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ತಂಗೆವ್ವ ಇವರ ವಿರುದ್ಧ ನಾನು ಕೇಸು ಮಾಡಿಲ್ಲ ಎಂದರೆ ಸರಿ . 7 ನೇ ಪ್ರತಿವಾದಿ ಬಸಪ್ಪ ಶಿವಪ್ಪ ಹರಿಜನ ಇವರು ಶೆಟ್ಟೆಪ್ಪನ ಮಗ ಅಲ್ಲ ಎಂದರೆ ನಿಜ. 7 ನೇ ಪ್ರತಿವಾದಿ ಮೂಲ ಪುರುಷ ಘೂಳಪ್ಪನ ಮನೆತನಕ್ಕೆ ಸಂಬಧಿಸಿದವರು ಅಲ್ಲ ಎಂದರೆ ಸರಿ. 7 ನೇ ಪ್ರತಿವಾದಿ ದಾವಾ ಜಮೀನುಗಳನ್ನು ಯಾವಾಗಲೂ ಸಾಗು ಮಾಡಿಲ್ಲ ಎಂದರೆ ನಿಜ. ಬಸಪ್ಪನ ಶಿವಪ್ಪ ಹರಿಜನ ಇವರ ತಾಯಿಯ ಹೆಸರು ನನಗೆ ಗೊತ್ತಿಲ್ಲ.

ಶಿವನವ್ವನಿಗೆ ನ್ಯಾಮವ್ವ ಎಂದು ಕರೆಯುತ್ತಾರೆ ಎಂದರೆ ಸರಿ. ಸುಮಾರು 18 ವರ್ಷಗಳ ಹಿಂದೆ ಅಸಲು ದಾವಾ ನಂ. 64/2003 ರಂತೆ ದಾವಾಸ್ತಿಗಳಿಗೆ ಸಂಬಂಧಿಸಿದಂತೆ 1/2 ಅಂಶ ಪಾಲಿಗೆ ಮಾಲಿಕರೆಂದು ಘೋಷಣೆ ಮಾಡಬೇಕೆಂದು ದಾವೆ ಮಾಡಿರುತ್ತೇವೆ ಎಂದರೆ ಸರಿ. ಸದ್ರಿ ಕೇಸು ನಮ್ಮ ವಿರುದ್ಧ ಆಗಿರುತ್ತದೆ ಎಂದರೆ ಸರಿ . ಸದ್ರಿ ತೀರ್ಪಿನ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿರುತ್ತೇವೆ. ಸದ್ರಿ ಕೇಸ ನಂಬರ ನನಗೆ ಗೊತ್ತಿಲ್ಲ.

ಅಸಲು ದಾವೆ ನಂ. 64/ 2003 ರ ತೀರ್ಪಿನ ವಿರುದ್ಧ ಘೂಳಪ್ಪ ಬಾಳಪ್ಪ ಹೊಲೇರ / ಬಂಗಾರಿ , ಕೆಂಪವ್ವ ಸಾತಪ್ಪ ತಳವಾರ ಹಾಗೂ ದುಂಡವ್ವ ಬಾಳಪ್ಪ ಹೊಲೇರ ಹಾಗೂ ಇತರರು ಸೇರಿ ನಮ್ಮ ವಿರುದ್ಧ ಆರ್.ಎ. ನಂ. 20/2012 ನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ . ಸದ್ರಿ ಅಪೀಲಿನಲ್ಲಿ ನಾವು ವಕೀಲರನ್ನು ನೇಮಿಸಿರುತ್ತೇವೆ ಎಂದರೆ ಸರಿ . ಸದ್ರಿ ಅಪೀಲು ಇನ್ನೂ ಚಾಲ್ತಿಯಲ್ಲಿದೆ ಎಂದರೆ ಸರಿ .

ಘೂಳಪ್ಪನ ಮಗ ಶೆಟ್ಟೆಪ್ಪ ಹೊಲೇರ ಇವರು ಎಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಅವರು ಗುಡಸದ ಮನೆಯಲ್ಲಿ ತೀರಿಕೊಂಡಿರುತ್ತಾರೆ. ಶೆಟ್ಟೆಪ್ಪ ನಮ್ಮ ಹೆಸರಿನಲ್ಲಿ ದಾವಾಸ್ತಿಗಳ ವಿಚಾರವಾಗಿ ಭಕ್ಷೀಸು ಪತ್ರ , ಮೃತ್ಯು ಪತ್ರ ಹಾಗೂ ಯಾವುದೇ ಕಾಗದವನ್ನು ಬರೆದು ಇಟ್ಟಿರುವುದಿಲ್ಲ. ಅದೇ ರೀತಿ 7 ನೇ ಪ್ರತಿವಾದಿ ಬಸಪ್ಪ ಶಿವಪ್ಪ ಹರಿಜನ ಆತನ ಹೆಸರಿನಲ್ಲಿ ಯಾವುದೇ ಕಾಗದ ಪತ್ರವನ್ನು ಬರೆದು ಇಟ್ಟಿರುವುದಿಲ್ಲ. ಶೆಟ್ಟೆಪ್ಪ ತೀರಿಕೊಂಡ ನಂತರ ನಾವೆ ವಾರಸುದಾರರು ಎಂದು ಉತ್ತರ ಜೀವಿತ ಪ್ರಮಾಣ ಪತ್ರವನ್ನು ಪಡೆದಿರುತ್ತೇವೆ. ಅದನ್ನು ಪಡೆದು ಎಷ್ಟು ವರ್ಷಗಳಾಗಿದೆ ಎಂದು ನನಗೆ ಗೊತ್ತಿಲ್ಲ. ಶೆಟ್ಟೆಪ್ಪನ ವಾರಸುದಾರರು ಎಂದು ತಲಾಟಿ , ಸರ್ಕಲ ಹಾಗೂ ತಹಶೀಲ್ದಾರ ಇವರಿಗೆ ಅರ್ಜಿ ಕೊಟ್ಟಿರುತ್ತೇವೆ. ಸದ್ರಿ ಕಾಗದ ಪತ್ರಗಳನ್ನು ಹಾಜರ ಪಡಿಸುತ್ತೇನೆ. ಶಟ್ಟೆಪ್ಪ , ಶಿವಲಿಂಗವ್ವ , ಶಿವನವ್ವ , ಬಸವ್ವ ಹಾಗೂ ತುಳಸವ್ವ ಈ ಐದೂ ಜನ ಇರುವ ಯಾವುದೇ ಫೋಟೊ ಇರುವುದಿಲ್ಲ. ಶೆಟೆಪ್ಪ ಹಾಗೂ ಶಿವಲಿಂಗವ್ವರವರಿಗೆ ಯಾವುದೇ ಮಕ್ಕಳು ಆಗಿರಲಲ್ಲ ಎಂದರೆ ಸರಿಯಲ್ಲ. ಶಿವನವ್ವ , ನಾನು ಹಾಗೂ ತುಳಸವ್ವ ಶೆಟ್ಟೆಪ್ಪನ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. ನಾನು ಎಲ ಖೊಟ್ಟಿ ದಾಖಲೆಗಳನ್ನು ಹಾಜರ ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಘೂಳಪ್ಪನ 2 ನೇ ಮಗ ಬಾಳಪ್ಪ . ಬಾಳಪ್ಪನ ಹೆಂಡತಿ ದುಂಡವ್ವ . ಸದ್ರಿ ದುಂಡವ್ವ ತೀರಿಕೊಂಡು ಈಗ 2 ತಿಂಗಳು ಆಗಿರುತ್ತದೆ ಎಂದರೆ ಸರಿ . ಬಾಳಪ್ಪ ಮತ್ತು ದುಂಡವ್ವ ಇವರಿಗೆ 1) ಘೂಳಪ್ಪ , 2) ಮಾರುತಿ 3) ಲಕ್ಷ್ಮಿಬಾಯಿ 4) ಕೆಂಪವ್ವ ಎಂಬ ಮಕ್ಕಳು ಎಂದರೆ ಸರಿ . 4 ನೇ ಪ್ರತಿವಾದಿ ಲಕ್ಷ್ಮಿ ಬಾಯಿಗೆ ಇವರಿಗೆ ಲಗ್ನವಾಗಿ ಸುಮಾರು 40 ವರ್ಷ

ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮಿಬಾಯಿ ರಾಯಭಾಗ ತಾಲೂಕಿನ ಬೊಮ್ಮನಾಳದಲ್ಲಿ ಇರುತ್ತಾಳೆ ಎಂದರೆ ಸರಿ . ಕೆಂಪವ್ವ ಇವರಿಗೆ ಮದುವೆಯು 35 ವರ್ಷಗಳ ಹಿಂದೆ ಆಗಿದ್ದು ಕೋಚರಿ ಗ್ರಾಮದಲ್ಲಿ ವಾಸವಾಗಿರುತ್ತಾಳೆ ಎಂದರೆ ಸರಿ. 6 ನೇ ಪ್ರತಿವಾದಿ 4 ನೇ ಪ್ರತಿವಾದಿಯ ಮಗಳು ಎಂದರೆ ಸರಿ . ಲಕ್ಷ್ಮಿಬಾಯಿ ಹಾಗೂ ಕೆಂಪವ್ವ ಇವರು ಮದುವೆಯಾದಾಗಿನಿಂದ ಗಂಡನ ಮನೆಯಲ್ಲಿ ವಾಸ ಇದ್ದು ದಾವಾಸ್ತಿಯಲ್ಲಿ ಸಾಗು ಮಾಡುತ್ತಿಲ್ಲ ಎಂದರೆ ಸರಿ .

ತುಳಸವ್ವನ ಗಂಡನ ಹೆಸರು ಮಲಪ್ಪ. 5 ರಿಂದ 8 ನೇ ವಾದಿಯರು ಗುಡಸಲ್ಲಿ ವಾಸವಾಗಿಲ್ಲ ಬೇರೆ ಕಡೆಗೆ ವಾಸವಾಗಿರುತ್ತಾರೆ ಎಂದರೆ ಸರಿ . ಅದೇ ರೀತಿ ವಾದಿ 2 ರಿಂದ 4 ರವರು ಬೇರೆ ಕಡೆಗೆ ವಾಸವಾಗಿರುತ್ತಾರೆ ಎಂದರೆ ಸರಿ . ಸರ್ವೆ ನಂ. 475 ಇದು 5 ಎಕರೆ ಇರುತ್ತದೆ. ಸರ್ವೆ ನಂ. 374 ರ ಜಮೀನು 16 ಗುಂಟೆ ಇರುತ್ತದೆ. ಸರ್ವೆ ನಂ. 374 ರಲ್ಲಿ ಮೂಲಪುರುಷ ಘೂಳಪ್ಪ ಇವರಿಗೆ ಕೇವಲ 8 ಗುಂಟೆ ಮಾತ್ರ ಇತ್ತು ಎಂದರೆ ಸರಿಯಲ್ಲ. ಘೂಳಪ್ಪ ಇವರ ಸರ್ವೆ ನಂ. 374 ರಲ್ಲಿ ಅರ್ಧ ಮಾತ್ರ ಸಾಗು ಮಾಡುತ್ತಿದ್ದರು ಎಂದರೆ ಸರಿ. ಉಳಿದ ಅರ್ಧ ಕ್ಷೇತ್ರದಲ್ಲಿ 5-6 ಮಂದಿ ಹಿಸ್ಸಾದಲ್ಲಿರುತ್ತಾರೆ ಎಂದರೆ ಸರಿ . ತುಕಾರಾಮ ಶಿವಪ್ಪ ಹೊಲೇರ , ರಾಜು ಶಿವಪ್ಪ ಹೊಲೇರ , ಗೌರವ್ವ ಲಗಮಪ್ಪ ಹೊಲೇರ ಹಿಸ್ಸೆದಲ್ಲಿರುತ್ತಾರೆ ಎಂದರೆ ಸರಿ . ಅವರ ಮೇಲೆ ನಾನು ದಾವೆ ಮಾಡಿಲ್ಲ ಎಂದರೆ ಸರಿ . ನಾನು ಎಷ್ಟು ಗುಂಟೆಗೆ ಪಾಲು ಕೇಳಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ವಾದ ಪತ್ರ ಬರೆಯಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ.

ಸರ್ವೆ ನಂ. 374 ರಲ್ಲಿ 16 ಗುಂಟೆಗೆ ಪಾಲು ಕೇಳಿರುತ್ತೇನೊ ಅಥವಾ 8 ಗುಂಟೆಗೆ ಪಾಲು ಕೇಳಿರುತ್ತೇನೊ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 475 ರ ಜಮೀನಿನ 4 ಪಟ್ಟಿ ಬಿಟ್ಟು ಸರ್ವೆ ನಂ. 374 ರ ಜಮೀನು ಇರುತ್ತದೆ ಎಂದರೆ ಸರಿ . ಎರಡೂ ಜಮೀನುಗಳು ಗುಡಸ ಗ್ರಾಮದಿಂದ 1 ಕಿ.ಮೀ ಅಂತರದಲ್ಲಿವೆ ಎಂದರೆ ಸರಿ . ದಾವಾ ಜಮೀನಿನ ದಕ್ಷಿಣಕ್ಕೆ ಪೂರ್ವ ಪಶ್ಚಿಮವಾಗಿ ಒಂದು ಕಾಲುವೆ ಹರಿದಿದೆ ಎಂದರೆ ಸರಿ. ಸದ್ರಿ ಕಾಲುವೆ ಸುಮಾರು 40 ವರ್ಷಗಳ ಹಿಂದೆ ಆಗಿರುತ್ತದೆ ಎಂದರೆ ಸರಿ . ಸದ್ರಿ

ಕಲುವೆಯಿಂದ ಅಕ್ಕಪಕ್ಕದ ಜಮೀನುಗಳ ಮಾಲೀಕರು ಕಬ್ಬು , ಗೋವಿನಜೋಳ ಮತ್ತು ಸದಕ ಬೆಳೆಯುತ್ತಾರೆ ಎಂದರೆ ಸರಿ . ಸರ್ವೆ ನಂ. 475 ರ ಜಮೀನಿನಲ್ಲಿ 1 ಬಾವಿ ಮತ್ತು 1 ಬೋರು ಇದೆ ಎಂದರೆ ಸರಿ. ಸದ್ರಿ ಜಮೀನಿನಲ್ಲಿ ಸುಮಾರು 40 ವರ್ಷಗಳಿಂದ ಕಬ್ಬು , ಗೋವಿನಜೋಳ ಮತ್ತು ಸದಕ ಬೆಳೆಯುತ್ತಾರೆ ಎಂದರೆ ಸರಿ . ಸುಮಾರು 18 ವರ್ಷಗಳಿಂದ 2 ದಾವಾಸ್ತಿ ಜಮೀನುಗಳಲ್ಲಿ 6 ನೇ ಪ್ರತಿವಾದಿ ಇವರು ಕಬ್ಬು , ಗೋವಿನಜೋಳ ಮತ್ತು ಸದಕ ಬೆಳೆಯುತ್ತಿದ್ದಾರೆ ಎಂದರೆ ಸರಿ . ಅದೇ ರೀತಿ ಸರ್ವೆ ನಂ. 475 ರ ಜಮೀನಿನಲ್ಲಿ 6 ನೇ ಪ್ರತಿವಾದಿಯ ವಾಸಿಸುವ ಮನೆ ಇದೆ ಎಂದರೆ ಸರಿ . ಸದ್ರಿ ಮನೆಯ ಮುಂದೆ ದನಗಳನ್ನು ಕಟ್ಟಲು ಶೆಡ್ಡು ಕಟ್ಟಿರುತ್ತಾರೆ ಎಂದರೆ ಸರಿ . ಅದೇ ರೀತಿ ಉತ್ತರ ಬದಿಗೆ ಇನ್ನೊಂದು ದನಗಳ ಶೆಡ್ಡು ಕಟ್ಟಿರುತ್ತಾರೆ ಎಂದರೆ ಸರಿ. ಈ ಎರಡೂ ಜಮೀನುಗಳಲ್ಲಿ 6 ನೇ ಪ್ರತಿವಾದಿ ಸ್ವಪ್ನಾ ಇವರೇ ಕಬ್ಜಾದಲ್ಲಿರುತ್ತಾರೆ ಎಂದರೆ ಸರಿ . ಸದ್ರಿ 6 ನೇ ಪ್ರತಿವಾದಿಯವರೇ ಕಬ್ಬನ್ನು ಬೆಳೆಸಿ ಅದರ ಹಣವನ್ನು 6 ನೇ ಪ್ರತಿವಾದಿಯವರೇ ಪಡೆಯುತ್ತಿದ್ದಾರೆ ಎಂದರೆ ಸರಿ .

ಕಬ್ಬು ಬೆಳೆಯಬೇಕಾದರೆ ಲಾವಣಿ ಫಾರ್ಮ ತುಂಬಬೇಕಾಗುತ್ತದೆ ಎಂದರೆ ಸರಿ . ನನ್ನ ಹೆಸರಿನಲ್ಲಾಗಲೀ ಹಾಗೂ ಶಿವಣವ್ವ , ತುಳಸವ್ವ ಹಾಗೂ ಅವರ ವಾರಸುದಾರರ ಹೆಸರಿನಲ್ಲಿ ಯಾವುದೇ ಲಾವಣಿ ಫಾರ್ಮ ಇಲ್ಲ ಎಂದರೆ ಸರಿ . ನಾನು 30 - 40 ವರ್ಷಗಳಿಂದ ಹೊಲದ ಕಡೆಗೆ ನಾನು ಹೋಗಿಲ್ಲ ಎಂದರೆ ಸರಿಯಲ್ಲ. ಸುಮಾರು 5-6 ವರ್ಷಗಳಿಂದ ಹೊಲದ ಕಡೆಗೆ ನಾನು ಹೋಗಿಲ್ಲ ಎಂದರೆ ಸರಿ. ನಾನು ಯಾವುದೇ ಹೊಲದಲ್ಲಿ ಸಾಗು ಮಾಡುತ್ತಿಲ್ಲದಿದ್ದರೂ ಸಹ ಸಮಾಯಕ ಕಬ್ಜಾದಲ್ಲಿದ್ದೇನೆ ಎಂದು ಸುಳುಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ನೀಡಿ ಮುಂದೂಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ